**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 171 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಂಗಳೂರಿನ ಉಳ್ಳಾಲ-ಸೋಮೇಶ್ವರದ ಕಡಲು ತೀರದ ರಸ್ತೆಗಳು ಕಡಲ್ಕೊರೆತದಿಂದ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಬಂದಿದೆ. |
| ಆ | ಹಾಗಿದ್ದಲ್ಲಿ ಸ್ಥಳೀಯರು ರಸ್ತೆ ಸಂಪರ್ಕವಿಲ್ಲದೇ ತೊಂದರೆ ಅನುಭವಿಸುತ್ತಿದ್ದು ಇದನ್ನು ಸರ್ಕಾರವು ಶೀಘ್ರವೇ ಸರಿಪಡಿಸಲು ಕ್ರಮ ಕೈಗೊಳ್ಳವುದೇ; ವಿವರ ನೀಡುವುದು | ದಕ್ಷಿಣ ಕನ್ನಡ ಜಿಲ್ಲೆ, ಉಳ್ಳಾಲ ತಾಲೂಕು, ಮಂಗಳೂರು ವಿಧಾನಸಭಾ ಕ್ಷೇತ್ರ (ಉಳ್ಳಾಲ) ವ್ಯಾಪ್ತಿಗೆ ಸದರಿ ಜಿಲ್ಲಾ ಮುಖ್ಯ ರಸ್ತೆಯು ಒಳಪಟ್ಟಿರುತ್ತದೆ. ಹಾಗೂ ಉಚ್ಚಿಲ ಗ್ರಾಮದಿಂದ ಪ್ರಾರಂಭಗೊಂಡು ಸಮುದ್ರ ಕಿನಾರೆವರೆಗೆ ಸುಮಾರು 2.60 ಕಿ.ಮೀ ಉದ್ದದ ರಸ್ತೆ ಹಾದುಹೋಗುತ್ತದೆ. ಸದರಿ ರಸ್ತೆಯ 700ಮೀ.ನಷ್ಟು ಉದ್ದವು ಸಮುದ್ರ ತೀರದ ಅತೀ ಸಮೀಪದಲ್ಲಿ ಹಾದು ಹೋಗಿರುತ್ತದೆ. ಈ ಸಮುದ್ರ ತೀರದಲ್ಲಿ ಹಾದುಹೋಗಿರುವ 600 ಮೀ. ಉದ್ದದ ರಸ್ತೆಯ ಭಾಗವು ಜುಲೈ 2020ರಲ್ಲಿ ಸಮುದ್ರ ಕೊರೆತದಿಂದ ಸಂಪೂರ್ಣವಾಗಿ ಹಾನಿಯಾಗಿ ಸಂಪರ್ಕ ಕಡಿತಗೊಂಡಿರುತ್ತದೆ. ಇದರಿಂದಾಗಿ ಸುಮಾರು 10 ಮನೆಗಳಿಗೆ ಸಂಪರ್ಕವಿಲ್ಲದಂತಾಗಿರುತ್ತದೆ.<br><br>2019-20ನೇ ಸಾಲಿನಲ್ಲಿ ADB ಇಲಾಖಾ ಅಧಿಕಾರಿಗಳ ಜೊತೆ ಚರ್ಚಿಸಿದಂತೆ off shore reef wall ಕಾಮಗಾರಿ ಪೂರ್ಣಗೊಂಡ ನಂತರ ಸಮುದ್ರ ಕೊರೆತ ತಡೆಗಟ್ಟಬಹುದು ಎಂದು ತಿಳಿಸಿದರ ಮೇರೆಗೆ ಮೇ-2021 ರಂದು ತಾತ್ಕಾಲಿಕವಾಗಿ 400ಮೀ.ಗೆ ಮಣ್ಣನ್ನು ಸಮುದ್ರ ಮಟ್ಟದಿಂದ ಎತ್ತರಗೊಳಿಸಿ ಜಲ್ಲಿಯ ಮೇಲ್ಪದರದೊಂದಿಗೆ ಜನರಿಗೆ ದಿನನಿತ್ಯ ಸಂಚಾರಕ್ಕೆ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಆದರೆ ತೌಕ್ತೆ ಚಂಡಮಾರುತದ ಸಮಯದಲ್ಲಿ ಸದರಿ ರಸ್ತೆಯೂ ಸಂಪೂರ್ಣವಾಗಿ ಹಾನಿಯಾಗಿರುತ್ತದೆ. 2021 ಮೇ ನಂತರ ಇಂದಿನ ದಿನದವರೆಗೂ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡಿದ್ದು, ಬಂದರು ಮತ್ತು ಮೀನುಗಾರಿಕೆ ಇಲಾಖೆವತಿಯಿಂದ ಸಮುದ್ರದ ಬದಿಗೆ ಅಲ್ಲಲ್ಲಿ ಕಲ್ಲುಗಳನ್ನು ಹಾಕಲಾಗಿರುತ್ತದೆ.<br><br>ಪ್ರಸ್ತುತ ಹಂತದಲ್ಲಿ ಯಾವುದೇ ಕಾಮಗಾರಿ ಕೈಗೊಂಡರೂ ಸಮುದ್ರ ಪಾಲಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಒಟ್ಟಾರೆ ಸದರಿ ರಸ್ತೆಯು ಬಂದರು ಮತ್ತು ಮೀನುಗಾರಿಕಾ ಇಲಾಖಾವತಿಯಿಂದ ಭಾಗಶ: ಕಲ್ಲುಗಳ ಬದಲಿಗೆ ಶಾಶ್ವತ ಪರಿಹಾರ ಒಳಗೊಂಡ ಕಾಮಗಾರಿ |
| ಇ | ತುರ್ತು ಸಂದರ್ಭಗಳು ತೀವ್ರ ಅನಾರೋಗ್ಯ ಅವಗಡ-ಜೀವ ಜಾನುವಾರು ಪ್ರಾಣಹಾನಿಯಾದರೆ ಇವುಗಳಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಯಾರು ಹೊಣೆ; ಯಾರ ಮೇಲೆ ಕ್ರಮ ತೆಗೆದುಕೊಳ್ಳವುದು ಈ ಬಗ್ಗೆ ಸರ್ಕಾರದ ನಿಲುವುಗಳೇನು; ವಿವರ ನೀಡುವುದು. | |
| ಈ | ಪ್ರತಿ ವರ್ಷವೂ ಮನರಾವರ್ತನೆ ಯಾಗುವ ಕಡಲ್ಕೊರೆತ, ಅದರಿಂದಾಗುವ ಹಾನಿ ತಪ್ಪಿಸಲು ದೀರ್ಘಕಾಲಿಕ ಶಾಶ್ವತ ಯೋಜನೆ ಗಳಿವೆಯೇ; ಕಳೆದ 2-3 ವರ್ಷಗಳಲ್ಲಿ ರಸ್ತೆ ಹಾನಿ ಇತ್ಯಾದಿ ಬಗೆಗಿನ ವಿವರ ನೀಡುವುದು; | |

| | | |
|---|---|---|
| | | ನಿರ್ಮಿಸಿದಲ್ಲಿ ಮಾತ್ರ, ಲೋಕೋಪಯೋಗಿ ಇಲಾಖಾ ವತಿಯಿಂದ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಬಹುದಾಗಿರುತ್ತದೆ.<br><br>ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ರಸ್ತೆ, ಸೇತುವೆ ಹಾಗೂ ಕಟ್ಟಡಗಳ ನಿರ್ವಹಣೆಯನ್ನು ಕಾಲಕಾಲಕ್ಕೆ ನಿರ್ವಹಿಸಲಾಗುವುದು. ಶಿಥಿಲಗೊಂಡಿರುವ ನಿರ್ಮಾಣಗಳನ್ನು ಗುರುತಿಸಿ ಪುನರ್ ನಿರ್ಮಾಣದ ಅವಶ್ಯಕತೆಯಿದ್ದಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಕ್ರಮ ವಹಿಸಲಾಗುವುದು. ಒಂದು ವೇಳೆ ಪ್ರಾಕೃತಿಕ ವಿಕೋಪದಿಂದಾಗಿ ಈ ನಿರ್ಮಾಣಗಳಲ್ಲಿ ಹಾನಿಯುಂಟಾದಲ್ಲಿ ಕೂಡಲೇ ತಾತ್ಕಾಲಿಕ ದುರಸ್ತಿಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು.<br><br>ಕರಾವಳಿ ಕೊರೆತದಿಂದಾಗಿ ಉಳ್ಳಾಲ-ಸೋಮೇಶ್ವರ ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್-66ಕ್ಕೆ ಯಾವುದೇ ಹಾನಿಯಾಗಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಉ | ಉತ್ತಮ ರಸ್ತೆ ಸಂಪರ್ಕಕ್ಕಾಗಿ ಸರ್ಕಾರ ಶೀಘ್ರ ಕಾರ್ಯ ಪ್ರವೃತ್ತವಾಗುವುದೇ (ಸಂಪೂರ್ಣ ವಿವರ ನೀಡುವುದು) | ಬಂದರು ಮತ್ತು ಮೀನುಗಾರಿಕಾ ಇಲಾಖಾವತಿಯಿಂದ ಶಾಶ್ವತ ಪರಿಹಾರ ತಡೆಗೋಡೆ ಕಾಮಗಾರಿ ನಿರ್ಮಿಸಿದಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಬಹುದಾಗಿರುತ್ತದೆ. |

ಕಡತ ಸಂಖ್ಯೆ: ಲೋಇ 133 ಸಿಬಿಆರ್ 2023 (ಇ)

(ಸತೀಶ್ ಲ. ಜಾರಕೀಹೊಳಿ)
ಲೋಕೋಪಯೋಗಿ ಸಚಿವರು